# ಸಿನಿಮಾಕ್ಕಾಗಿ ರೂಪಾಂತರ

## ವಿಲಾಸ್ ರಾವ್
### ಉದಯದ 'ಸುಂದರಿ'ಯ ಭೀಮ

■ ರಾಘವೇಂದ್ರ ಕೆ.



◆ **ಅಭಿನಯದ ಆರಂಭದ ದಿನಗಳು ಹೇಗಿದ್ದವು?**

ನನ್ನೂರು ಕಡೂರು. ಓದಿದ್ದು ತುಮಕೂರು ಸಿದ್ದಗಂಗಾ ಮಠದಲ್ಲಿ. 'ಚಂದ್ರೋದಯ ಕಲಾವೃಂದ' ನಾಟಕ ತಂಡದಲ್ಲಿ ಗುರುತಿಸಿಕೊಂಡೆ. ಆಗ ನಟ ಆಗಬೇಕು ಎನ್ನುವ ಯೋಚನೆ ಇರಲಿಲ್ಲ. ಅನೇಕ ನಗರಗಳಲ್ಲಿ ನಾಟಕವನ್ನು ಆಡಿದ್ದೇನೆ. ಸಾಮಾನ್ಯವಾಗಿ ಸಾಮಾಜಿಕ ಕಳಕಳಿ ಇರುವ ವಿಷಯವನ್ನು ಆಧರಿಸಿದ ನಾಟಕವನ್ನು ಆ ತಂಡ ಆಡುತ್ತಿತ್ತು. ಸಿದ್ದಗಂಗಾ ಮಠದ ವಾತಾವರಣ, ಅಲ್ಲಿ ಬಂದು ಹೋಗುತ್ತಿದ್ದ ಸೆಲೆಬ್ರಿಟಿಗಳು ಒಂದು ರೀತಿಯಲ್ಲಿ ಪ್ರಭಾವ ಬೀರಿದರು ಅಂತ ಅನ್ನಿಸುತ್ತದೆ. ದೊಡ್ಡ ವ್ಯಕ್ತಿಯಾಗಿ ಬೆಳೆಯಬೇಕು ಎಂಬ ಆಸೆ ಮೂಡಿತು. ನಟನೆಯಲ್ಲಿ ಆಸಕ್ತಿ ಇದ್ದಿದ್ದರಿಂದ ಈ ಕ್ಷೇತ್ರ ಆರಿಸಿದೆ.

◆ **ಪಾತ್ರ ಪಡೆಯುವ ಪರದಾಟದ ಕಥೆ ಹೇಗಿತ್ತು?**

ತುಮಕೂರಿನಿಂದ ಬೆಂಗಳೂರಿಗೆ ಆಗ ರೈಲಿನ ಚಾರ್ಜ್ 15 ರೂಪಾಯಿ. ಕೇವಲ 30 ರೂಪಾಯಿ ಇದ್ದರೆ ನಾನು ಬೆಂಗಳೂರಿಗೆ ಬರುತ್ತಿದ್ದೆ. ಗಾಂಧಿನಗರದಲ್ಲಿ ಸಿನಿಮಾ ನಿರ್ಮಾಪಕರ ಕಚೇರಿಗಳಿಗೆ ಅಲೆದಾಡಿ ಸಂಜೆ ಮರಳಿ ಹೋಗುತ್ತಿದ್ದೆ. ಎಷ್ಟೋ ದಿನ ತರಗತಿಗಳಿಗೆ ಬಂಕ್ ಹಾಕಿ ಬಂದಿದ್ದೆ. ನನ್ನನ್ನು ಗುರುತಿಸುವವರು ಯಾರೂ ಸಿಗಲಿಲ್ಲ. ಹೀಗೆ ಎಷ್ಟು ದಿನ ಬಂದು ಹೋಗುವುದು. ಬೆಂಗಳೂರಿನಲ್ಲೇ ಇರಬೇಕು ಎಂದು ಯೋಚಿಸಿದೆ. ಸಂಬಂಧಿಕರ ಮನೆಗೆ ಹೋಗುವಂತಿಲ್ಲ. ಬೇರೆ ಯಾರೂ ಪರಿಚಯ ಇಲ್ಲ. ಹೀಗೆ ಓಡಾಟದಲ್ಲಿ ಒಬ್ಬರ ಪರಿಚಯ ಆಗಿತ್ತು. ಅವರು ಸಿನಿಮಾ ಮಾಡುತ್ತಿದ್ದರು ಅವರ ಜೊತೆ ಮೂರು ನಾಲ್ಕು ದಿನ. ಮತ್ತೆ ಇನ್ನೊಬ್ಬರ ಕಚೇರಿಯಲ್ಲಿ ಒಂದೆರಡು ದಿನ ಕಳೆಯುತ್ತಿದ್ದೆ. ಅದೇ ಸಂದರ್ಭದಲ್ಲಿ ಗೆಳೆಯನೊಬ್ಬ ರೂಮ್ ಮಾಡಿದ. ಸ್ವಲ್ಪ ದಿನ ಅಲ್ಲಿ ಇರಲು ಅವಕಾಶ ಆಯಿತು. ಸಿನಿಮಾ ಮಾಡಬೇಕೆಂಬ ಹಂಬಲ ಮತ್ತಷ್ಟು ಬಿರುಸಾಯಿತು. ನಿತ್ಯ ಸುತ್ತಾಡಿದ್ದು ಆಯಿತೇ ಹೊರತು, ಸಿನಿಮಾಕ್ಕಂತೂ ಅವಕಾಶ ಸಿಗುತ್ತಿರಲಿಲ್ಲ. ಧಾರಾವಾಹಿಗೆ ಪ್ರಯತ್ನಿಸೋಣ ಎಂದು ಪ್ರಯತ್ನ ಮಾಡಿದೆ. ಮೊದಲ ಅವಕಾಶ 'ಅಕ್ಕ'ದಲ್ಲಿ ಸಿಕ್ಕಿತು. ಒಂದೇ ದಿನ ಬಂದು ಹೋಗುವ ಪಾತ್ರ. ನಂತರ 'ಶಾಂತಂ ಪಾಪಂ', 'ಪತ್ತೇದಾರಿ ಪ್ರತಿಭಾ' ಪುಟ್ಟ ಪಾತ್ರಗಳನ್ನು ಮಾಡಿದೆ. ಇಂತಹ ಪಾತ್ರ ಮಾಡಬಾರದು. ನಿರಂತರವಾಗಿರುವ ಪಾತ್ರವನ್ನೇ ಮಾಡಬೇಕು ಎಂದು ಯೋಚಿಸಿದೆ. ಮ್ಯಾನೇಜರ್ ಒಬ್ಬರು 'ಸಿಲ್ಲಿ ಲಲ್ಲಿ' ಆಡಿಷನಿಗೆ ಕಳಿಸಿದರು. ಅದಕ್ಕೂ ಮೊದಲು 'ಮಗಳು ಜಾನಕಿ'ಗೆ ಲುಕ್‌ಟೆಸ್ಟ್ ಕೊಟ್ಟಿದ್ದೆ, ಕೊನೆ ಹಂತದಲ್ಲಿ ಕೈ ತಪ್ಪಿತ್ತು. ಎರಡು ಮೂರು ಸುತ್ತಿನ ನಂತರ 'ಸಿಲ್ಲಿ ಲಲ್ಲಿ'ಗೆ ಅವಕಾಶ ಸಿಕ್ಕಿತು. ಸುಮಾರು 300 ಕಂತು ಪ್ರಸಾರ ಆಯಿತು.

◆ **ಪೋಷಕರು ನಿಮ್ಮ ಆಸೆಗೆ ಬೆಂಬಲಿಸಿದರೆ?**

ಪೋಷಕರು ವಿರೋಧ ಮಾಡಿದರು ಅನ್ನುವುದಕ್ಕಿಂತ, ತಮ್ಮ ಭಯವನ್ನು ತೋಡಿಕೊಂಡರು. ಸಂಪ್ರದಾಯಸ್ಥ ಮಧ್ಯಮ ವರ್ಗದ ಕುಟುಂಬದ ಹಿನ್ನೆಲೆಯಿಂದ ಬಂದವ ನಾನು. ಅವರಿಗೆ ತಮ್ಮ ಮಗ ಏನು ಆಗುತ್ತಾನೋ. ಮೊದಲೇ ಸೌಮ್ಯ ಸ್ವಭಾವದವನು ಸಿನಿಮಾ ಜಗತ್ತಿನಲ್ಲಿ ಎಲ್ಲಿ ಕಳೆದು ಹೋಗುತ್ತಾನೋ ಎನ್ನುವ ಆತಂಕ ಇತ್ತು. ದೀರ್ಘ ಪಾತ್ರಗಳು ಸಿಕ್ಕ ಮೇಲೆ ಅವರಿಗೂ ವಿಶ್ವಾಸ ಬಂದಿದೆ. ನನಗೆ ನೈತಿಕ ಬಲ ಎಂದರೆ ನನ್ನ ತಾಯಿ. ಅವರ ಧೈರ್ಯವೇ ನನ್ನನ್ನು ಮುಂದಕ್ಕೆ ತಂದಿದೆ. ಹಣ ಕೊಡಲು ಅವರ ಬಳಿ ಇಲ್ಲ. ಅವರ ಜೀವನಕ್ಕೆ ಯಾವ ತೊಂದರೆಯೂ ಇಲ್ಲ. ತಾಯಿ ಹುರಿದುಂಬಿಸುವ ಮಾತು ನನ್ನಲ್ಲಿ ಚೈತನ್ಯವನ್ನು ತುಂಬಿದೆ. ಸೀರಿಯಲ್ ಜೊತೆ ಸಿನಿಮಾಕ್ಕೂ ಅವಕಾಶ ಸಿಗ್ತಿವೆ.

◆ **ಈಗ ಏನು ಮಾಡುತ್ತಿದ್ದೀರಿ?**

ಸಿನಿಮಾದಲ್ಲಿ ಒಳ್ಳೆಯ ಪಾತ್ರಗಳನ್ನು ನಿರ್ವಹಿಸಬೇಕು ಎನ್ನುವುದು ನನ್ನ ಆಲೋಚನೆ. ಅದಕ್ಕಾಗಿ ರೂಪಾಂತರಗೊಂಡಿದ್ದೇನೆ. ಅಂದರೆ ಪಾತ್ರದ ಅಗತ್ಯಕ್ಕೆ 12 ಕೆ.ಜಿ. ತೂಕವನ್ನು ಹೆಚ್ಚಿಸಿಕೊಂಡಿದ್ದೇನೆ. ಮೂರು ನಾಲ್ಕು ಸಿನಿಮಾಗಳಿಗೆ ಅವಕಾಶ ಇದೆ. ಕೋವಿಡ್ ಸಂದರ್ಭದಲ್ಲಿ ಒಂದೆರಡು ಕಿರುಚಿತ್ರಗಳನ್ನು ಮಾಡಿದೆ. ಸಿನಿಮಾ ನಟ ಆಗಲೇಬೇಕು ಎಂಬ ಕನಸಿನಿಂದ ಬಂದಿದ್ದೇನೆ. ಅದಕ್ಕೆ ಏನು ಬೇಕು ಎನ್ನುವುದು ಗೊತ್ತಾಗಿದೆ. ಅದಕ್ಕಾಗಿ ತಯಾರಿ ಆಗುತ್ತಿದ್ದೇನೆ. ■